imma™


# Sanjevani

## Namma Metro Ready at 2013

**Date: 16-04-2010 | Edition: Bangalore | Page: 6 | Source: Bureau | Clip size (cm): W: 10 H: 16**




# ನಮ್ಮ ಮೆಟ್ರೊ 2013ಕ್ಕೆ ಸಿದ್ಧ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಏ. ೧೫- ನಗರದ ಎಲ್ಲಾ ಹಂತದ ಮೆಟ್ರೊ ರೈಲು ಸಂಚಾರವನ್ನು ಬರುವ 2013ರ ಮಾರ್ಚ್ ವೇಳೆಗೆ ಅನುಷ್ಠಾನಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ಇಲ್ಲಿ ತಿಳಿಸಿದರು.

ಮಲ್ಲೇಶ್ವರಂನ ಸಂಪಿಗೆ ರಸ್ತೆಯ ಮಂತ್ರಿ ಸಂಕೀರ್ಣದಲ್ಲಿ ಖಾಸಗಿ ಸಹಭಾಗಿತ್ವದ ನಮ್ಮ ಮೆಟ್ರೊದ ಸಂಪಿಗೆರಸ್ತೆ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದ ಮುಖ್ಯಮಂತ್ರಿಗಳು ಬರುವ ಡಿಸೆಂಬರ್ ವೇಳೆಗೆ ಬಯ್ಯಪ್ಪನ ಹಳ್ಳಿಯಿಂದ ಚಿನ್ನಸ್ವಾಮಿ ಕ್ರೀಡಾಂಗಣದವರೆಗಿನ ಏಳು ಕಿಲೋಮೀಟರ್‌ಗಳ ಮೆಟ್ರೊ ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ಹೇಳಿದರು. ಮಂತ್ರಿ ಸಂಕೀರ್ಣದ ಬಳಿ 80 ಸಾವಿರ ಚದರಡಿಯ ಮೆಟ್ರೊ ರೈಲು ನಿಲ್ದಾಣ 20 ತಿಂಗಳೊಳಗೆ ಪೂರ್ಣಗೊಳ್ಳಲಿದೆ. ಮಂತ್ರಿ ಸಹಭಾಗಿತ್ವದಲ್ಲಿ ನಿರ್ಮಾಣವಾಗಲಿರುವ ನಿಲ್ದಾಣದ ಬಳಿ 8 ಲಕ್ಷ ಚದರಡಿಯ ವಾಣಿಜ್ಯ ಸಂಕೀರ್ಣ ತಲೆ ಎತ್ತಲಿದೆ ಎಂದರು.

ನಗರದಲ್ಲಿನ ಮೂಲಭೂತ ಸೌಕರ್ಯಗಳು ಕಾಲಮಿತಿಯೊಳಗೆ ಪೂರ್ಣಗೊಂಡರೆ,

(2ನೇ ಪುಟ ನೋಡಿ)

imma™

# Sanjevani

## Namma Metro Ready at 2013

Date: 16-04-2010 | Edition: Bangalore | Page: 6 | Source: Bureau | Clip size (cm): W: 10 H: 16

Clip: 2 of 2

(ಒಂದನೇ ಪುಟದಿಂದ)

# ನಮ್ಮ ಮೆಟ್ರೊ 2013ಕ್ಕೆ ಸಿದ್ಧ

ಯೋಜನಾ ವೆಚ್ಚವೂ, ಕಡಿಮೆಯಾಗಿ ಜನರಿಗೆ ಅನುಕೂಲವೂ ಆಗಲಿವೆ ಎಂದು ಮುಖ್ಯ ಮಂತ್ರಿಗಳು ತಿಳಿಸಿದರು.

ಹಿಂದಿನ ಸರ್ಕಾರಕ್ಕೆ ಹೋಲಿಸಿದರೆ ಮೆಟ್ರೊ ರೈಲು ಕಾಮಗಾರಿಯ ಪ್ರಗತಿ ನಮ್ಮ ಸರ್ಕಾರದಲ್ಲಿ ಶೇ. 25ರಷ್ಟಿದ್ದು ತೀವ್ರಗತಿಯಲ್ಲಿ ನಡೆಯುತ್ತಿದೆ ಎಂದ ಅವರು ಮೆನೋರೈಲು, ವರ್ತುಲ ರೈಲು ಆರಂಭಿಸಿ ಸಂಚಾರ ದಟ್ಟಣೆಯನ್ನು ಇನ್ನಷ್ಟು ತಗ್ಗಿಸುವ ಚಿಂತನೆ ನಡೆದಿದೆ ಎಂದು ಹೇಳಿದರು. ಬೆಂಗಳೂರನ್ನು ವಿಶ್ವದರ್ಜೆಯ ನಗರವನ್ನಾಗಿ ಮಾಡಲು ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬರುವ 3 ವರ್ಷಗಳಲ್ಲಿ 18,872 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಎಂದು ವಿವರಿಸಿದರು.

ನಗರದಲ್ಲಿ ಉತ್ತಮ ವಾತಾವರಣ ಮೂಡಿ ಅಂತರಜಲ ಹೆಚ್ಚಳವಾಗಲು 200 ಕೋಟಿ ವೆಚ್ಚದಲ್ಲಿ 25 ಕೆರೆಗಳ ಪುನರುಜ್ಜೀವನ ಹಾಗೂ ಅಭಿವೃದ್ಧಿಗೊಳಿಸಲಾಗುತ್ತಿದೆ ಎಂದು ತಿಳಿಸಿದರು. ಬಿಡದಿ ಬಳಿ 1400 ಮೆಗಾವ್ಯಾಟ್ ಉತ್ಪಾದನಾ ಕೇಂದ್ರವನ್ನು ಆರಂಭಿಸಲಾಗುತ್ತಿದ್ದು ನಗರದ ವಿದ್ಯುತ್ ಅಭಾವವನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಾಂಸದರಾದ ಡಿ.ಬಿ. ಚಂದ್ರೇಗೌಡ, ಪಿ.ಸಿ. ಮೋಹನ್, ಶಾಸಕರಾದ ದಿನೇಶ್ ಗುಂಡೂರಾವ್, ಅಶ್ವತ್ಥನಾರಾಯಣ, ಮಂತ್ರಿ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಸುಶೀಲ್ ಮಂತ್ರಿ ಇನ್ನಿತರರು ಪಾಲ್ಗೊಂಡಿದ್ದರು.



ಕಳೆದ ರಾತ್ರಿ ನಿಧನರಾದ ಶಾಸಕ ಚಂದ್ರಶೇಖರಪಾಟೀಲ್ ರೇವೂರ್ ಪಾರ್ಥಿವ ಶರೀರದ ಮುಂದೆ ರೋಧಿಸುತ್ತಿರುವ ಪತ್ನಿ ಹಾಗೂ ಬಂಧು ಬಳಗ.